ಶ್ರೀ ಡಿ. ಕೆ ನಾಯ್ಕರ್.— ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ ಒಂದು ಯಾವುದಾದರೂ ಸುಪ್ರಿಮ್ ಕೋರ್ಟಿನಲ್ಲಿ ಕೇಸು ಬಂದರೆ ಅಂಥ ಪ್ರಸಂಗ ಬಂದಾಗ ಕೇಸಿಗೆ ಸಂಬಂಧಪಟ್ಟಂತೆ ಅದಕ್ಕೆ ಹೆಚ್ಚಾದಂತ ವಿವರಗಳು ಮತ್ತು ಹೆಚ್ಚುಕಡಿಮೆಕಾರ್ಯಗಳು ಬಂದರೆ ಆಗ ಇಬ್ಬರು ಅಡ್ವೊಕೇಟ್ಸ್‌ನ್ನು ಎಂಗೇಜ್ ಮಾಡುವ ಪ್ರಸಂಗ ಇದೆ. ಯಾವ ಕೇಸಿನಲ್ಲಿ ಎಷ್ಟು ಜನ ಅಪಿಯರ್ ಆಗಿದ್ದಾರೆ ಎಂದು ಉತ್ತರ ಒದಗಿಸಬೇಕು ಎಂದು ಹೇಳಿದರೆ ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರ ಒದಗಿಸುತ್ತೇನೆ. ಒಟ್ಟು ಹಣ ಎಷ್ಟು ಎಂದು ಕೇಳಿದ್ದಿರಿ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ತಾವು ಇಂಡಿವಿಜುಯಲ್ ಆಗಿ ಯಾವ ಯಾವ ಕೇಸಿಗೆ ಎಷ್ಟೆಷ್ಟು ಹಣ ಕೊಡ್ಬಿದ್ದಿರಿ ಎಂದು ಕೇಳಿದರೆ ಈಗ ಅದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಸುಪ್ರಿಮ್ ಕೋರ್ಟಿಗೆ ಪ್ರತಿಯೊಂದು ಸ್ಟೇಟ್‌ನಲ್ಲೂ ಕೇಸ್ ಬಂದಾಗ ಅಟ್ರ್ವೊಕೇಟ್ ಜನರಲ್‌ರನ್ನು ಪ್ರತಿಯೊಂದು ಸ್ಟೇಟ್‌ನಿಂದಲೂ ಕಳುಹಿಸಿದರು ಅದೇ ರೀತಿ ನಾವು ಕಳುಹಿಸಿದ್ದೇವೆ. ಈಗ ತಾವುಕೇಳಿದ್ದು ಎನು ಎಂದರೆ ಟೋಟಲ್ ಅಮೌಂಟ್ ಪೇಡ್ ಎಂದು ಕೇಳಿದ್ದೀರಿ ನಾವು ಹೇಳಿದ್ದೇವೆ. ಪ್ರತಿಯೊಂದು ಕೇಸಿನಲ್ಲಿ ಯಾವ ಯಾವ ಕೇಸಿಗೆ ಎಷ್ಟು ಹಣ ಕೊಟ್ಟಿದ್ದಿರೆಂದು ಮಾನ್ಯ ಸದಸ್ಯರು ನೋಟೀಸ್ ಕೊಟ್ಟರೆ ನಾನು ಕೊಡುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.— ಉಚ್ಚತಮ ನ್ಯಾಯಾಲಯದಲ್ಲಿ ಯಾವ ಯಾವ ಪ್ರಕರಣಗಳಲ್ಲಿ ನಮ್ಮ ಸಂಸ್ಥಾನದ ಕೇಸುಗಳು ನಡೆದಿವೆ ಅದಕ್ಕೆ ಯಾವ ಯಾವ ಅಡ್ವೊಕೇಟ್‌ಗಳು ಅಪಿಯರ್ ಆತದಾಗಿರೆಂದು ಕೇಳಲು ನಮಗೆ ಹಕ್ಕು ಇದೆಯೋ ಇಲ್ಲವೋ ಹೇಳಿ. ಎಷ್ಟು ಪ್ರಕರಣ ಎಂದು ಇಲ್ಲಿ ಕಾಣಿಸಿಲ್ಲ ಆದ್ದರಿಂದ ಎಷ್ಟು ಪ್ರಕರಣಗಳಂದು ವಿವರ ಕೊಟ್ಟುಬಿಟ್ಟರೆ ನಮಗೆ ಅನುಕೂಲವಾಗ ತ್ತದ್ದೆ ಆದ್ದರಿಂದ ಇಲ್ಲಿ ಸ್ಪಷ್ಟವಾಗಿ ಮಾನ್ಯ ಸಚಿವರು ಉಚ್ಚತಮ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳನ್ನು ವಾದಿಸಲು ಎಷ್ಟು ಜನ ಅಡ್ವೊಕೇಟರ್‌ಗಳು ಹೋಗಿದ್ದಾರು ಯಾರು ಯಾರಿಗೆ ಎಷ್ಟಷ್ಟು ಹಣ ಕೊಡಲಾಗಿದೆ ಮತ್ತು ಯಾವ ಯಾವ ಕೇಸಿಗೆ ಎಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಡಿ. ಕೆ ನಾಯ್ಕರ್.—ಎಷ್ಟು ಕೇಸುಗಳನ್ನು ನಡೆಸಿದ್ದಾರೆ ಮತ್ತು ನ್ಯಾಯವಾದಿಗಳಿಗೆ ಪಾವತಿ ಮಾಡಿರುವ ಮೊಬಲಗು ಎಷ್ಟು ಎಂದು ಮಾತ್ರ ಕೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಿದ್ದೇವೆ.

ಶ್ರೀ ಎಚ್. ಟಿ ಕೃಷ್ಣಪ್ಪ.— ನಾನು ಹೇಳತಕ್ಕುದ್ದು ಎನು ಎಂದರೆ ಒಂದು ಪ್ರಶ್ನೆಯನ್ನು ಕೇಳಿದಾಗ ಸಾಮಾನ್ಯವಾಗಿ ಹಲವಾರು ಉಪ ಪ್ರಶ್ನೆಗಳು ಬರುತ್ತವೆ. ಅದರಲ್ಲೂ ಇಂಥ ಪ್ರಧಾನವಾದ ಪ್ರಶ್ನೆಯಲ್ಲಿ ಎಷ್ಟೋ ಉಪ ಪ್ರಶ್ನೆಗಳು ಬರುತ್ತವೆ. ಅದಕ್ಕೆ ಮಾನ್ಯ ಮಂತ್ರಿಗಳು ಪ್ರಿಪೇರ್ ಆಗಿ ಬರಬೇಕಾಗಿತ್ತು ಸುಪ್ರೀಮ್‌ಕೋರ್ಟು ಮತ್ತು ಇತರ ಕೋರ್ಟುಗಳ ಮುಂದೆ ವಾಧಿಸುವುದಕ್ಕಾಗಿ ವಿಶೇಷವಾದ ಹಣವನ್ನು ಕೊಡಲು ಯಾವ ಆಧಾರವೂ ಇಲ್ಲದೆ ಯಾವ ನಿಯಮಗಳನ್ನು ಅನುಸರಿಸದೆ ಇರುವುದರಿಂದೆ ಅದಕ್ಕೆ ಕಾರಣವಾದರೂ ಏನು ಎಂಬುದಕ್ಕೆ ನಮಗೆ ಸಮರ್ಪಕವಾದ ಉತ್ತರ ಸಿಗುವವರೆಗೆ ಈ ಪ್ರಶ್ನೆಯನ್ನು ವಿತ್ ಹೆಲ್ಡ್ ಮಾಡಬೇಕು.

ಅಧ್ಯಕ್ಷರು —ತಾವು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುವುದಕ್ಕೆ ಹೇಳುತ್ತೇನೆ.

FEES PAID TO PLEAD GOVERNMENT CASES BEFORE SUPREME COURT

7. SRI M. S. KRISHNAN (Malleswaram).—

Will the Minister for Law and Parliamentary Affairs be pleased to state ;--

(*a*) the number and names of the Advocates who argue the cases for the Government before the Supreme Court.

(*b*) the amounts spent on the Advocates during 1972 and 1973 as fees, allowance etc., (the names of the Advocates as well as details of the amounts paid to each persons may be furnished).

(c) whether the Government consider the amount spent as reasonable and necessary. if not, the steps the Government has taken to reduce the expenditure ?

SRI D. K. NAIKAR.(Minister for Law and Parliamentary Affairs)—

(a) Advocate on Record 1
Senior Advocates 11

Nams of Advocata on Record

1. Sri M. Veerappa

Names of Senior Advocates

1. Sri Niren De. Attorney General of India
2. Sri L. N. Sinha, Solicitor General of India
3. Sri F. S, Nariman, Addl. Solicitor General of India
4. Sri R. N. Byra Reddy, Advocate General for Mysore.
5. Sri A. K. Sen
6. Sri S. V. Gupte
7. Sri Somanath Iyer
8. Sri H. B. Datar
9. Sri Narayan Nattar
10. Sri B. R. L. Iyengar
11. Sri Basi Reddy

(b) Rs. 1.03,810-00. Details of amount paid from 1st January 1972 to 28th August 1973 are as follows ;

Names of the Advocates Shriyuths.			*Amount paid* Rs. P.
1. R. N. Byra Reddy	...	...	30,130-00
2. S. V. Gupte	...	...	3,750-00
3. Somanath Iyer	...	...	14,800-00
4. V. S. Desai	...	...	12,930-00
5. H. B. Datar	...	...	22,210-00
6. M. Veerappa	...	...	1,460-00
7. S. S. Javali	...	...	5,400-00
8. S. K. Dholakia	...	...	160-00
9. M. P. Chandrakantharaj Urs		...	12,900-00

(c) Yes. The Government consider the amount spent is reasonable and is necessary.

ಶ್ರೀ ಎಂ. ಎಸ್. ಕೃಷ್ಣನ್,– ತಾವು "ಎ" ಗೆ ಉತ್ತರ ಕೊಡುತ್ತಾ ೧೧ ಪ್ಲಸ್ ೧,೦೨ ಹೆಸರು ಗಳನ್ನು ಕೊಟ್ಟಿದ್ದೀರಿ. ಈ ೧೨ ಜನರ ಹೆಸರು ಮತ್ತು "ಬಿ" ಗೆ ಉತ್ತರವಾಗಿ ನಾಲ್ಕು ಜನರ ಹೆಸರನ್ನು ಕೊಟ್ಟಿದ್ದೀರಿ ಜೊತೆಗೆ ದುಡ್ಡನ್ನು ಕೊಟ್ಟಿದ್ದೀರಿ. ಅವರ ಹೆಸರು ದೇಸಾಯಿ, ವಿ. ಎಸ್. ಜವಳಿ ಎಸ್. ಎಸ್, ಬಿ. ಕೆ. ದೊಲಾಕಿಯಾ ಮತ್ತು ಎಂ. ಪಿ. ಚಂದ್ರಕಾಂತರಾಜ ಅರಸ್. ನಾನು ಕೇಳಿದ ಪ್ರಶ್ನೆ ಏನು ಎಂದರೆ ಸುಪ್ರೀಮ್ ಕೋರ್ಟ್‌ನಲ್ಲಿ ವಾದಿಸಿದವರ ಹೆಸರುಗಳನ್ನು ಕೇಳಿದ್ದೆನು. ಆದರೆ ತಾವು ವಾಸದಿದೆ ದುಡ್ಡು ಕೊಟ್ಟಿದ್ದೀರಾ ಹೇಗೆ?

†ಶ್ರೀ ಡಿ. ಕೆ. ನಾಯಕರ್.—೧೧-೫-೭೩ ಕ್ಕಿಂತ ಮೊದಲು ೧೨ ಮಂದಿ ಪ್ಯಾನಲ್ ಇತ್ತು. ೧-೫-೭೩ರ ಮೇಲೆ ಹೊಸ ಸ್ಕೀಮ್ ಮಾಡಿದೆ. ಆ ಸ್ಕೀಮ್ ಮಾಡಿದ ಮೇಲೆ ಸೀನಿಯರ್ ಲಾಯರ್‌ಗಳನ್ನು ನೇಮಿಸಿದೆ. ಅದಕ್ಕಿಂತ ಮೊದಲು ಹೇಳಿದಂಥ ಪ್ರಸಂಗಗಳು ಬಂದಾಗ ದೇಸಾಯಿ ಮತ್ತು ದೊಲಾಕಿಯಾ ಇವರನ್ನು ಒಂಸಾದು ಕೇಸಿನಲ್ಲಿ ನೇಮಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೇಳಿದ್ದು ಏನು ಎಂದರೆ ಅವರು ಮೊದಲು ಲಿಸ್ಟ್‌ನಲ್ಲಿ ಇದವರು ಆಗಿರಲಿಲ್ಲವೆಂದು ನೆಮಿಸಿಕೊಂಡಿರೇ ಏನು ? ಇದು ಯಾವುದು ಲೆಕ್ಕಕ್ಕೆ ಜಮಕ್ಕೆ ಇಲ್ಲವೇ? ಈ ನಾಲ್ಕು ಜನ ವಿ ಎಸ್. ದೇಸಾಯಿ, ಬಿ ಕೆ. ದೊಲಾಕಿಯಾ, ಎಸ್. ಎಸ್. ಜವಳಿ ಮತ್ತು ಎಂ. ಪಿ. ಚಂದ್ರಕಾಂತ ರಾಜ ಅರಸ್ ಇವರು ೧೧ ಜನರ ಲಿಸ್ಟ್‌ನಲ್ಲಿ ಬರುವುದಿಲ್ಲ. ಇವರನ್ನು ಯಾವ ರೀತಿ ಸೇರಿಸಿಕೊಂಡು ರೂ. ೧೨,೯೬-೦೦, ರೂ. ೧೬೦-೦೦, ರೂ. ೧,೪೬೦-೦೦ ಮತ್ತು ರೂ. ೨೨,೯೦೦.೦೦ ಮೊತ್ತವನ್ನು ಕೊಟ್ಟಿದ್ದು?

ಶ್ರೀ ಡಿ. ಕೆ. ನಾಯ್ಕರ್.—ನಾನು ಹೇಳುವುದು ೧-೫-೭೩ ರಿಂದ ಹೊಸ ಸ್ಕೀಮ್ ಬಂತು ಅದಕ್ಕೆ ಮೊದಲು ಏಪ್ರಿಲ್ ೫ರವರೆಗೆ ಪ್ಯಾನಲ್ ಇರಲಿಲ್ಲ. ಇಬ್ಬರು ಜೂನಿಯರ್ ಅಡ್ವೊಕೇಟ್ಸ್ ಇದ್ದರು. ಸೀನಿಯರ್ ಅಡ್ವೋಟ್ಸ್‌ಗಳನ್ನು ಅವರು ನೇಮಿಸುವಂತೆ ಸ್ಕೀಮ್ ಮಾಡಿದ್ದಾರೆ ಅದಕ್ಕಿಂತ ಮೊದಲು ಏಪ್ರಿಲ್ ಮೊದಲಾಜನ ಇದ್ದವರಲ್ಲಿ ಜೂನಿಯರ್ ಅಡ್ವೊಕೇಟ್ಸ್ ಇದ್ದರು. ಆದ್ದರಿಂದ ಇವರನ್ನು ನೇಮಿಸಿಕೊಂಡಿದ್ದರೆಂದು ಉತ್ತರ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ವಕೀಲರನ್ನು ನೇಮಿಸಿಕೊಳ್ಳುವುದು ಯಾವ ಆಧಾರದ ಮೇಲೆ. ಅದಕ್ಕೆ ಯಾದಾದರೂ ಆಧಾರವನ್ನು ಇಟ್ಟುಕೊಂಡಿದ್ದೀರಾ? ತಾವು ಕೊಟ್ಟಿರುವ ಪಟ್ಟಿಯಲ್ಲಿ ಸೋಮನಾಥ ಅಯ್ಯರ್ ಎಂದು ಇದೆ. ಅವರು ಯಾರು ಅಧ್ಯಕ್ಷರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ ನಮ್ಮ ಬಳಸಿರುವ ಪದ ಏನು ಎಂದರೆ ಮಹಾವಾದೇಕ್ಷಕ ಮತ್ತು ಅಪರ ಮಹಾವಾದೇಕ್ಷಕ ಎಂದು ಬಳಸಿದ್ದಾರೆ. ಅದಕ್ಕಿಂತ ಸುಲಭವಾದ ಭಾಷೆಗಳಲ್ಲಿ ಕೊಟ್ಟಿದ್ದರೆ ಚೆನ್ನಾಗಿತ್ತು. ಅಪರ ಎಂದರೆ ಅಪರ—ಕಮ್ಮಂದು ಮಾಡುತ್ತಿದ್ದರು. ಆದ್ದರಿಂದ ಇದನ್ನು ಸ್ವಲ್ಪ ಸುಲಭವಾಗಿ ಹೇಳಬೇಕು. ಇವರನ್ನು ಯಾವ ಆಧಾರದ ಮೇಲೆ ಹುಡಿದ್ದಾರೆ. ಸೀನಿಯಾರಿಟಿ ಮೇಲೆ ಮಾಡಿದ್ದಾರೆಯೇ.

ಶ್ರೀ ಡಿ. ಕೆ. ನಾಯ್ಕರ್.—ಕ್ಯಾಲಿಫಿಕೇಷನ್ ಮತ್ತು ಅವರ ಅನುಭವವನ್ನು ಗಣನೆ ಮಾಡಿ ಮಾಡಲಾಗಿದೆ

೨-೦೦ ಪಿ. ಎಮ್

ಶ್ರೀ ಎಂ. ಎಸ್. ಕೃಷ್ಣನ್.—ತಾವು (ಸಿ)ಗೆ ಉತ್ತರ ಕೊಡುತ್ತಾ "Yes, The Government consider the amount spent is reasonable and is necessary" ಎಂದು ಹೇಳಿದ್ದೀರಿ, ಇದು ಯಾವ ಆಧಾರದ ಮೇಲೆ ನ್ಯಾಯ ಮತ್ತು ಅವಶ್ಯಕ ಎಂದು ತೀರ್ಮಾನಕ್ಕೆ ಬಂದಿದ್ದಿರಿ. ಇವರು ಎಷ್ಟು ಕೇಸುಗಳನ್ನು ಆಗ್ಯೂ ಮಾಡಿದರು. ಎಷ್ಟೆಷ್ಟು ಕೇಸುಗಳಲ್ಲಿ ಸರ್ಕಾರದ ಪರವಾಗಿ ವಾದ ಮಾಡಿ ಗೆದ್ದಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುವುದಕ್ಕಾಗುತ್ತದೆಯೇ?

ಶ್ರೀ ಡಿ. ಕೆ. ನಾಯ್ಕರ್.—ಗೆದಿಯುವುದು, ಸೋಲುವುದು, ಫೀಸ್ ಕೊಡುವುದಕ್ಕೆ ಸಂಬಂಧವಿಲ್ಲ. ಒಂದು ದಿವಸದಲ್ಲಿ ಯಾವ ಕೇಸ್ ನಡೆಯುತ್ತದೆಯೋ ಆ ಒಂದು ದಿವಸಕ್ಕೆ ಸುಪ್ರೀಂ ಕೋರ್ಟು ರೂಲ್ಸ್ ಪ್ರಕಾರ ಸೀನಿಯರ್ ಅಡ್ವೊಕೇಟಿಗೆ ೧,೬೦೦-೦೦ ರೂಪಾಯಿ ಎಂದು ಇದೆ. ಅವರು ಮಾಡಿದಂಥ ಡ್ಯೂಟಿಗೆ, ಸುಪ್ರೀಂ ಕೋರ್ಟಿನ ನಿಯಮಗಳಿಗನುಸಾರವಾಗಿ ಹಣ ಕೊಟ್ಟಿದೆ. ಅವರಿಗೆ ಹೆಚ್ಚಿನ ಹಣವನ್ನು ನಾವು ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದರಲ್ಲಿ ರಾಜಕೀಯದ ಅಪಾಯಿಟ್‌ಮೆಂಟ್ ಇಲ್ಲವೇ.

(ಉತ್ತರ ಇಲ್ಲ)